ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)

# ಜಿಲ್ಲಾಧಿಕಾರಿಗಳ ಕಾರ್ಯಾಲಯ

ಚಾಮರಾಜನಗರ ಜಿಲ್ಲೆ, ಚಾಮರಾಜನಗರ.

☎ 08226-223160
08226-223170
Fax: 08226- 223180

ನಂ. ಸಿಬ್ಬಂದಿ(1)ಸಿಆರ್/225/2013-14 ದಿನಾಂಕ: 19 -03-2015

## ತಿಳುವಳಿಕೆ ಪತ್ರ

ಚಾಮರಾಜನಗರ ಜಿಲ್ಲೆ ಕಂದಾಯ ಇಲಾಖೆಯಲ್ಲಿ 50 ಗ್ರಾಮ ಲೆಕ್ಕಾಧಿಕಾರಿ ಹುದ್ದೆಗಳ ನೇರನೇಮಕಾತಿಗೆ ಆನ್‌ಲೈನ್ ವೆಬ್‌ಸೈಟ್ ಮುಖೇನ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸ್ವೀಕೃತಿಯಾಗಿರುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗಿದ್ದು ಮೆರಿಟ್ ಹಾಗೂ ರೋಸ್ಟರ್ ಆಧಾರದ ಮೇಲೆ 1:5 ಅನುಪಾತದಲ್ಲಿ ಅಭ್ಯರ್ಥಿಗಳ **ಪರಿಶೀಲನಾ ಪಟ್ಟಿಯನ್ನು (Verification List) ಅಭ್ಯರ್ಥಿಗಳ ಮಾಹಿತಿಗಾಗಿ ವೆಬ್ ಸೈಟ್ ವಿಳಾಸ http://Chamrajnaga.nic.in ದಲ್ಲಿ ಪ್ರಕಟಿಸಲಾಗಿದೆ.** ಈ ಕುರಿತು ಆಕ್ಷೇಪಣೆ/ತಕರಾರುಗಳಿದ್ದಲ್ಲಿ ದೃಢಪಡಿಸುವ ಪೂರಕ ದಾಖಲಾತಿಗಳೊಂದಿಗೆ ದಿನಾಂಕ: 10-03-2015ರ ಸಂಜೆ 5.30 ಗಂಟೆಯೊಳಗಾಗಿ ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಸತಕ್ಕದ್ದು. ಆ ನಂತರ ಬರುವ ಆಕ್ಷೇಪಣೆ/ತಕರಾರುಗಳನ್ನು ಸ್ವೀಕರಿಸಲಾಗುವುದಿಲ್ಲವೆಂದು ತಿಳಿಸಲಾಗಿತ್ತು.

ಪರಿಶೀಲನಾ ಪಟ್ಟಿ **(Verification List)** ಯಲ್ಲಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಪ್ರವರ್ಗ-1/ ಪ್ರವರ್ಗ-2ಎ/ ಪ್ರವರ್ಗ-2ಬಿ/ ಪ್ರವರ್ಗ-3ಎ/ ಪ್ರವರ್ಗ-3ಬಿ ವರ್ಗಗಳ ವ್ಯಾಪ್ತಿಯಲ್ಲಿ ಬರುವ ಅಭ್ಯರ್ಥಿಗಳು ಮಾತ್ರ ಅವಶ್ಯ ಮೂಲ ದಾಖಲಾತಿಗಳೊಂದಿಗೆ ದಿನಾಂಕ: 09-04-2015 ರಂದು ಬೆಳಿಗ್ಗೆ 10.00 ಗಂಟೆಗೆ ಚಾಮರಾಜನಗರ **ಜಿಲ್ಲಾ ಆಡಳಿತ ಭವನದಲ್ಲಿರುವ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ** ಹಾಜರಾಗತಕ್ಕದ್ದು. ಅಭ್ಯರ್ಥಿಗಳು ನಿಗದಿತ ದಿನಾಂಕದಂದು ಮೂಲ ದಾಖಲೆಗಳೊಂದಿಗೆ ಹಾಜರಾಗದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

**ಅಭ್ಯರ್ಥಿಯು ದಿನಾಂಕ:09-04-2015 ರಂದು ಹಾಜರುಪಡಿಸಬೇಕಾದ ಮೂಲ ದಾಖಲಾತಿಗಳು:**

1. ವಯಸ್ಸಿನ ಬಗ್ಗೆ ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಂಕ ಪಟ್ಟಿ
2. ದ್ವಿತೀಯ ಪಿ.ಯು.ಸಿ./ಸಿ.ಬಿ.ಎಸ್.ಸಿ./ಐ.ಸಿ.ಎಸ್.ಇ. ಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಅಂಕ ಪಟ್ಟಿ

..2)

3. ಅಭ್ಯರ್ಥಿಯು ಮೀಸಲಾತಿ ಕೋರಿರುವ ಸಂಬಂಧವಾಗಿ ಅಂದರೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಪ್ರವರ್ಗ 1/ ವರ್ಗ 2ಎ/ ವರ್ಗ 2ಬಿ/ ವರ್ಗ 3ಎ/ ವರ್ಗ 3ಬಿ ವರ್ಗದ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್‌ರಿಂದ ಪಡೆದ ನಿಗಧಿತ ನಮೂನೆಯ ಜಾತಿ ದೃಢೀಕರಣ ಪತ್ರವನ್ನು ಹಾಜರುಪಡಿಸಬೇಕು.
4. ಗ್ರಾಮೀಣ/ ಕನ್ನಡ ಮಾಧ್ಯಮ/ ಮಾಜಿ ಸೈನಿಕ/ ಅಂಗವಿಕಲ/ಸರ್ಕಾರಿ ಉದ್ಯೋಗದಲ್ಲಿರುವ ದೃಢೀಕರಣ/ ಯೋಜನಾ ನಿರಾಶ್ರಿತರು/ ಮೀಸಲಾತಿ ರೀತ್ಯಾ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಈ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಅಗತ್ಯ ದೃಢೀಕರಣ ಪತ್ರಗಳನ್ನು ಸಲ್ಲಿಸಬೇಕು.
5. ಅರ್ಜಿ ಶುಲ್ಕ ಪಾವತಿಸಿದ ಬಗ್ಗೆ ಬ್ಯಾಂಕ್ ಚಲನ್.
6. ಗುರುತಿನ ಚೀಟಿ/ ವಿದ್ಯಾ ಸಂಸ್ಥೆಯಿಂದ ಪಡೆದ ಗುರುತಿನ ಚೀಟಿ/ ಪತ್ರಾಂಕಿತ ಅಧಿಕಾರಿಗಳಿಂದ ಪಡೆದ ಗುರುತಿನ ಚೀಟಿ/ ಮತದಾರರ ಗುರುತಿನ ಚೀಟಿ/ ಡ್ರೈವಿಂಗ್ ಲೈಸನ್ಸ್/ ಆಧಾರ್ ಗುರುತಿನ ಚೀಟಿ.
7. ಅಭ್ಯರ್ಥಿಗಳು ಇತ್ತೀಚಿನ 02 ಪಾಸ್‌ಪೋರ್ಟ್ ಸೈಜ್ ಫೋಟೋ ಹಾಜರುಪಡಿಸಬೇಕು.
8. ಅಂಗವಿಕಲ ಮೀಸಲಾತಿ ಕೋರಿರುವ ಅಭ್ಯರ್ಥಿಗಳು ನಿಗಧಿಪಡಿಸಿದ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪಡೆದಿರುವ ದೃಢೀಕರಣ ಪತ್ರ ಹಾಜರುಪಡಿಸಬೇಕು.

ಮೇಲ್ಕಂಡ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ 2 ಜೆರಾಕ್ಸ್ ಪ್ರತಿಗಳನ್ನು ಪರಿಶೀಲನಾ ದಿನಾಂಕದಂದು ಹಾಜರುಪಡಿಸತಕ್ಕದ್ದು.

ಅಭ್ಯರ್ಥಿಗಳು ಈ ತಿಳುವಳಿಕೆ ಪತ್ರವನ್ನು ನೇಮಕಾತಿ ಪತ್ರವೆಂದು ತಿಳಿಯತಕ್ಕದ್ದಲ್ಲ.

ಅಪರ ಜಿಲ್ಲಾಧಿಕಾರಿ ಹಾಗೂ
ಸದಸ್ಯ ಕಾರ್ಯದರ್ಶಿಗಳು,
ಗ್ರಾಮ ಲೆಕ್ಕಿಗರ ಆಯ್ಕೆ ಪ್ರಾಧಿಕಾರ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ.

ಗೆ,

ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)

☎ 08226-223160
08226-223170
Fax: 08226- 223180

# ಜಿಲ್ಲಾಧಿಕಾರಿಗಳ ಕಾರ್ಯಾಲಯ

ಚಾಮರಾಜನಗರ ಜಿಲ್ಲೆ, ಚಾಮರಾಜನಗರ.

ನಂ. ಸಿಬ್ಬಂದಿ(1)ಸಿಆರ್/225/2013-14 ದಿನಾಂಕ: 19 -03-2015

## ತಿಳುವಳಿಕೆ ಪತ್ರ

ಚಾಮರಾಜನಗರ ಜಿಲ್ಲೆ ಕಂದಾಯ ಇಲಾಖೆಯಲ್ಲಿ 50 ಗ್ರಾಮ ಲೆಕ್ಕಾಧಿಕಾರಿ ಹುದ್ದೆಗಳ ನೇರನೇಮಕಾತಿಗೆ ಆನ್‌ಲೈನ್ ವೆಬ್‌ಸೈಟ್ ಮುಖೇನ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸ್ವೀಕೃತಿಯಾಗಿರುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗಿದ್ದು ಮೆರಿಟ್ ಹಾಗೂ ರೋಸ್ಟರ್ ಆಧಾರದ ಮೇಲೆ 1:5 ಅನುಪಾತದಲ್ಲಿ ಅಭ್ಯರ್ಥಿಗಳ **ಪರಿಶೀಲನಾ ಪಟ್ಟಿಯನ್ನು (Verification List) ಅಭ್ಯರ್ಥಿಗಳ ಮಾಹಿತಿಗಾಗಿ ವೆಬ್ ಸೈಟ್ ವಿಳಾಸ http://Chamrajnaga.nic.in ದಲ್ಲಿ ಪ್ರಕಟಿಸಲಾಗಿದೆ.** ಈ ಕುರಿತು ಆಕ್ಷೇಪಣೆ/ತಕರಾರುಗಳಿದ್ದಲ್ಲಿ ದೃಢಪಡಿಸುವ ಪೂರಕ ದಾಖಲಾತಿಗಳೊಂದಿಗೆ ದಿನಾಂಕ: 10-03-2015ರ ಸಂಜೆ 5.30 ಗಂಟೆಯೊಳಗಾಗಿ ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಸತಕ್ಕದ್ದು. ಆ ನಂತರ ಬರುವ ಆಕ್ಷೇಪಣೆ/ತಕರಾರುಗಳನ್ನು ಸ್ವೀಕರಿಸಲಾಗುವುದಿಲ್ಲವೆಂದು ತಿಳಿಸಲಾಗಿತ್ತು.

ಪರಿಶೀಲನಾ ಪಟ್ಟಿ (**Verification List**) ಯಲ್ಲಿರುವ ಸಾಮಾನ್ಯ ವರ್ಗದ (**General**) ವ್ಯಾಪ್ತಿಯಲ್ಲಿ ಬರುವ ಅಭ್ಯರ್ಥಿಗಳು ಮಾತ್ರ ಅವಶ್ಯ ಮೂಲ ದಾಖಲಾತಿಗಳೊಂದಿಗೆ ದಿನಾಂಕ: 08-04-2015 ರಂದು ಬೆಳಿಗ್ಗೆ 10.00 ಗಂಟೆಗೆ ಚಾಮರಾಜನಗರ **ಜಿಲ್ಲಾ ಆಡಳಿತ ಭವನದಲ್ಲಿರುವ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ** ಹಾಜರಾಗತಕ್ಕದ್ದು. ಅಭ್ಯರ್ಥಿಗಳು ನಿಗಧಿತ ದಿನಾಂಕದಂದು ಮೂಲ ದಾಖಲೆಗಳೊಂದಿಗೆ ಹಾಜರಾಗದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

**ಅಭ್ಯರ್ಥಿಯು ದಿನಾಂಕ:09-04-2015 ರಂದು ಹಾಜರುಪಡಿಸಬೇಕಾದ ಮೂಲ ದಾಖಲಾತಿಗಳು:**

1. ವಯಸ್ಸಿನ ಬಗ್ಗೆ ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಂಕ ಪಟ್ಟಿ.
2. ದ್ವಿತೀಯ ಪಿ.ಯು.ಸಿ./ಸಿ.ಬಿ.ಎಸ್.ಸಿ./ಐ.ಸಿ.ಎಸ್.ಇ. ಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಅಂಕ ಪಟ್ಟಿ

..2)

3. ಅಭ್ಯರ್ಥಿಯು ಮೀಸಲಾತಿ ಕೋರಿರುವ ಸಂಬಂಧವಾಗಿ ಅಂದರೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಪ್ರವರ್ಗ 1/ ವರ್ಗ 2ಎ/ ವರ್ಗ 2ಬಿ/ ವರ್ಗ 3ಎ/ ವರ್ಗ 3ಬಿ ವರ್ಗದ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್‌ರಿಂದ ಪಡೆದ ನಿಗಧಿತ ನಮೂನೆಯ ಜಾತಿ ದೃಢೀಕರಣ ಪತ್ರವನ್ನು ಹಾಜರುಪಡಿಸಬೇಕು.
4. ಗ್ರಾಮೀಣ/ ಕನ್ನಡ ಮಾಧ್ಯಮ/ ಮಾಜಿ ಸೈನಿಕ/ ಅಂಗವಿಕಲ/ಸರ್ಕಾರಿ ಉದ್ಯೋಗದಲ್ಲಿರುವ ದೃಢೀಕರಣ/ ಯೋಜನಾ ನಿರಾಶ್ರಿತರು/ ಮೀಸಲಾತಿ ರೀತ್ಯಾ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಈ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಅಗತ್ಯ ದೃಢೀಕರಣ ಪತ್ರಗಳನ್ನು ಸಲ್ಲಿಸಬೇಕು.
5. ಅರ್ಜಿ ಶುಲ್ಕ ಪಾವತಿಸಿದ ಬಗ್ಗೆ ಬ್ಯಾಂಕ್ ಚಲನ್.
6. ಗುರುತಿನ ಚೀಟಿ/ ವಿದ್ಯಾ ಸಂಸ್ಥೆಯಿಂದ ಪಡೆದ ಗುರುತಿನ ಚೀಟಿ/ ಪತ್ರಾಂಕಿತ ಅಧಿಕಾರಿಗಳಿಂದ ಪಡೆದ ಗುರುತಿನ ಚೀಟಿ/ ಮತದಾರರ ಗುರುತಿನ ಚೀಟಿ/ ಡ್ರೈವಿಂಗ್ ಲೈಸನ್ಸ್/ ಆಧಾರ್ ಗುರುತಿನ ಚೀಟಿ.
7. ಅಭ್ಯರ್ಥಿಗಳು ಇತ್ತೀಚಿನ 02 ಪಾಸ್‌ಪೋರ್ಟ್ ಸೈಜ್ ಫೋಟೋ ಹಾಜರುಪಡಿಸಬೇಕು.
8. ಅಂಗವಿಕಲ ಮೀಸಲಾತಿ ಕೋರಿರುವ ಅಭ್ಯರ್ಥಿಗಳು ನಿಗಧಿಪಡಿಸಿದ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪಡೆದಿರುವ ದೃಢೀಕರಣ ಪತ್ರ ಹಾಜರುಪಡಿಸಬೇಕು.

ಮೇಲ್ಕಂಡ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ 2 ಜೆರಾಕ್ಸ್ ಪ್ರತಿಗಳನ್ನು ಪರಿಶೀಲನಾ ದಿನಾಂಕದಂದು ಹಾಜರುಪಡಿಸತಕ್ಕದ್ದು.

ಅಭ್ಯರ್ಥಿಗಳು ಈ ತಿಳುವಳಿಕೆ ಪತ್ರವನ್ನು ನೇಮಕಾತಿ ಪತ್ರವೆಂದು ತಿಳಿಯತಕ್ಕದ್ದಲ್ಲ.

ಅಪರ ಜಿಲ್ಲಾಧಿಕಾರಿ ಹಾಗೂ
ಸದಸ್ಯ ಕಾರ್ಯದರ್ಶಿಗಳು,
ಗ್ರಾಮ ಲೆಕ್ಕಿಗರ ಆಯ್ಕೆ ಪ್ರಾಧಿಕಾರ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ.

ಗೆ,